[redacted]



# ನದಾಫ/ಪಿಂಜಾರ ಸಮಾಜದ ಸಮಾವೇಶ, ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಪಿಂಜಾರ ಸಮುದಾಯ ಶಿಕ್ಷಣಕ್ಕೆ ಒತ್ತು ನೀಡಲಿ: ಎಚ್.ಕೆ. ಪಾಟೀಲ

ಗದಗ (ಆರ್.ಆರ್.ಸಿದ್ನೆಕೊಪ್ಪ, ಐ.ಡಿ.ನದಾಫ್ ವೇದಿಕೆ): 'ಪಿಂಜಾರ ಸಮಾಜದ ಇತಿಹಾಸದಲ್ಲೇ ಅತಿ ಹೆಚ್ಚು ಜನರು ಒಂದೇ ಕಡೆ ಸೇರಿರುವ ಸಮಾವೇಶ ಇದು. ಸಮಾಜದ ಸಂಘಟನೆಗೆ ಶ್ರಮಿಸಿದ ಇಬ್ರಾಹಿಂ ಸಾಹೇಬರು ಮತ್ತು ಆರ್.ಆರ್. ಸಿದ್ನೆಕೊಪ್ಪ ಅವರಿಗೆ ತುಂಬ ಖುಷಿ ಕೊಡುವ ಸಂಗತಿ ಇದಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಆಂಗ್ಲೋ ಉರ್ದು ಶಾಲಾ ಮೈದಾನದಲ್ಲಿ ಕರ್ನಾಟಕ ರಾಜ್ಯ ನದಾಫ್, ಪಿಂಜಾರ ಸಂಘದ ವತಿಯಿಂದ ಶನಿವಾರ ನಡೆದ 32ನೇ ವರ್ಷದ ಸಂಸ್ಥಾಪನಾ ದಿನಾಚರಣೆ, ರಾಜ್ಯ ಮಟ್ಟದ ಮಹಿಳಾ ಸಮಾವೇಶ, ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

'ಪಿಂಜಾರ ಸಮಾಜ ರಾಜಕೀಯವಾಗಿ, ಆಡಳಿತಾತ್ಮಕವಾಗಿ ದೊಡ್ಡದಿದೆ. ಸಮಾಜದ ಸಾಕಷ್ಟು ಜನರು ರಾಜಕೀಯ ಕ್ಷೇತ್ರದಲ್ಲಿ ದೊಡ್ಡ ಹುದ್ದೆ ಅಲಂಕರಿಸಿದ್ದಾರೆ' ಎಂದು ಹೇಳಿದರು.

ಪಿಂಜಾರ ಸಮಾಜದವರು ರೈತರಂತೆ ಮುಗ್ಧರು. ತಮಗೆ ಬೇಕಾಗಿರುವುದನ್ನು ಕಸಿದುಕೊಳ್ಳುವ ಮನೋಭಾವ ಇಲ್ಲದವರು. ಆದರೆ, ಹೋರಾಟದ ಮೂಲಕ ಪಡೆದುಕೊಳ್ಳಲು ಮುಂದಾಗಬೇಕಿದೆ' ಎಂದು ಹೇಳಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹೊರತುಪಡಿಸಿದರೆ ಪಿಂಜಾರ ಸಮುದಾಯ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ. ಇರುವ ಸೌಲಭ್ಯಗಳನ್ನು ಬಳಕೆ ಮಾಡಿಕೊಂಡು ತಮ್ಮ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುತ್ತೇವೆ ಎಂಬ ನಿರ್ಣಯವನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

'ಒಗ್ಗಟ್ಟು ಸಂಘಟನೆಯ ಬಲ. ಈ ಬಲದಿಂದ ಸರ್ಕಾರವನ್ನು ಅಲುಗಾಡಿಸಿ ನ್ಯಾಯಯುತ ಬೇಡಿಕೆಗಳನ್ನು ಪಡೆದುಕೊಳ್ಳಲು ಸಾಧ್ಯವಿದೆ. ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಸಮಾಜದ ನಿಯೋಗವನ್ನು ಮುಖ್ಯಮಂತ್ರಿಗಳ ಜತೆಗೆ ಭೇಟಿ ಮಾಡಿಸಿ, ಸಮಾಜದ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡುವೆ' ಎಂದು ತಿಳಿಸಿದರು. ಕರ್ನಾಟಕ ನದಾಫ್, ಪಿಂಜಾರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಚ್. ಜಲೀಲ ಸಾಬ್ ಮಾತನಾಡಿ, 'ಪಿಂಜಾರರು ಅರೆ ಅಲೆಮಾರಿಗಳು. ಹಾಗಾಗಿ, ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ. ಸ್ಪರ್ಧಾತ್ಮಕ ಯುಗದಲ್ಲಿ ಇತರೆ ಮಕ್ಕಳ ಜತೆಗೆ ಸ್ಪರ್ಧಿಸಲೂ ಸಾಧ್ಯವಾಗದೇ ಇರುವ ಕಾರಣ ಉನ್ನತ ಹುದ್ದೆಗಳು ಇಂದಿಗೂ ನಮಗೆ ಮರೀಚಿಕೆಯಾಗಿವೆ' ಎಂದು ಹೇಳಿದರು.

ಅಲ್ಪಸಂಖ್ಯಾತರ ಶಾಲೆಗಳಲ್ಲಿ ಪಿಂಜಾರ ಸಮಾದ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಮೀಸಲಾತಿ ಕಲ್ಪಿಸಬೇಕು. ಕೇಂದ್ರ ಒಬಿಸಿ ಪಟ್ಟಿಯಲ್ಲಿ ಶೇ 2ರಷ್ಟು ಒಳಮೀಸಲಾತಿ ಕಲ್ಪಿಸಬೇಕು' ಎಂದು ಆಗ್ರಹಿಸಿದರು.

'ನಮ್ಮ ಸಮಾಜಕ್ಕೆ ಕೆಟಗರಿ 1ರಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಆದರೆ, ಪ್ರಮಾಣಪತ್ರ ನೀಡಲು ಅಧಿಕಾರಿಗಳು ಸಿಗಲಾರದಂತಹ ದಾಖಲೆಪತ್ರಗಳನ್ನು ಕೇಳುತ್ತಿದ್ದಾರೆ. ಇನ್ನು ನಾವು 2ಬಿಯಲ್ಲಿ ಅವಕಾಶ ಪಡೆದುಕೊಂಡರೆ ಮುಸ್ಲಿಂ ಸಮಾಜದವರೇ ನಮ್ಮ ಮೇಲೆ ಪ್ರಕರಣ ದಾಖಲಿಸುತ್ತಿದ್ದಾರೆ. ಏನು ಮಾಡುವುದೆಂದು ತೋಚದೆ ನಮ್ಮ ಮಕ್ಕಳು ಚಿಂತಿತರಾಗಿದ್ದಾರೆ' ಎಂದು ಹೇಳಿದರು.

'ರಾಜ್ಯದಲ್ಲಿ ವಕ್ಫ್‌ಗೆ ಸೇರಿದ ಸಾಕಷ್ಟು ಆಸ್ತಿಗಳು ಖಾಲಿ ಬಿದ್ದಿವೆ. ಮುಸ್ಲಿಂ ಸಮಾಜದ ಮಾಲೀಕತ್ವದಲ್ಲೇ ಇರುವ ಆಸ್ತಿಗಳನ್ನು ನಮಗೆ ಗುತ್ತಿಗೆ ರೂಪದಲ್ಲಿ ಒದಗಿಸಿದರೆ ಅಲ್ಲಿ ಮಹಿಳೆಯರು ಮತ್ತು ಮಕ್ಕಳ ಸಬಲೀಕರಣಕ್ಕೆ ನೆರವಾಗುವಂತಹ ಕಾರ್ಯಕ್ರಮ ರೂಪಿಸಲಾಗುವುದು. ಇದಕ್ಕೆ ಸರ್ಕಾರ ಮತ್ತು ವಕ್ಫ್ ಮಂಡಳಿ ನೆರವಾಗಬೇಕು. ಸ್ಥಳೀಯ ಸಂಸ್ಥೆಗಳಿಗೆ ಪಿಂಜಾರ ಸಮಾಜದವರ ನಾಮನಿರ್ದೇಶನ, ವಿಧಾನ ಪರಿಷತ್‌ಗೆ ಆಯ್ಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು' ಎಂದು ಆಗ್ರಹಿಸಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, 'ಒಗ್ಗಟ್ಟಿನಲ್ಲಿ ಬಲವಿದೆ. ಶಕ್ತಿ ಇದ್ದಲ್ಲಿ ಯಶಸ್ಸು ಸಿಗುತ್ತದೆ. ಪಿಂಜಾರ ಸಮಾಜದವರು ಒಗ್ಗಟ್ಟು ಪ್ರದರ್ಶನದ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು' ಎಂದರು.

'ಹಿಂದಿನ ಬಿಜೆಪಿ ಸರ್ಕಾರ ಪಿಂಜಾರ ಸಮಾಜಕ್ಕೆ ಪ್ರವರ್ಗ1ರ ಸೌಲಭ್ಯ ಒದಗಿಸಿತ್ತು. ಆದರೆ, ಅಧಿಕಾರಿ ವರ್ಗ ಪ್ರಮಾಣಪತ್ರ ಕೊಡುತ್ತಿಲ್ಲ. ಇದರಿಂದಾಗಿ, ಸಮಾಜದ ವಿದ್ಯಾರ್ಥಿಗಳು ವೈದ್ಯಕೀಯ ಸೇರಿದಂತೆ ಉನ್ನತ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಇದನ್ನು ಸರಿಪಡಿಸಲು ಸರ್ಕಾರ ಕ್ರಮವಹಿಸಬೇಕು' ಎಂದರು.

ನದಾಫ್, ಪಿಂಜಾರ ನಿಗಮ ಆಗಿದೆ. ಅದಕ್ಕೆ ಬಜೆಟ್‌ನಲ್ಲಿ ಹಣ ನಿಗದಿ ಆಗಿಲ್ಲ. ಅದನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮವಹಿಸಬೇಕು. ಸಮಾಜದ ಮಕ್ಕಳಿಗೆ ಶಿಕ್ಷಣ ಕೊಡಿಸಿ. ಶಿಕ್ಷಣದ ಮೂಲಕ ಹೋರಾಟದ ನಡೆಸಿದರೆ ಮಾತ್ರ ಬದಲಾವಣೆ ಕಾಣಲು ಸಾಧ್ಯ ಎಂದರು.ರೋಣ ಶಾಸಕ ಜಿ.ಎಸ್.ಪಾಟೀಲ ಮಾತನಾಡಿ, ನದಾಫ್, ಪಿಂಜಾರ ಸಮಾಜದವರೊಂದಿಗೆ ನಾವು ಹಿಂದಿನಿಂದಲೂ ಅನ್ಯೋನ್ಯ ದಿಂದ ಬದುಕಿದ್ದೇವೆ. ನಾವು ಯಾವತ್ತಿಗೂ ನಿಮ್ಮನ್ನು ಬೇರೆಯಾಗಿ ಕಂಡಿಲ್ಲ.




ಸಾಧ್ಯ ಇರುವಾಗಲೆಲ್ಲಾ ರಾಜಕೀಯ ಪ್ರಾತಿನಿಧ್ಯ ಅವಕಾಶ ನೀಡಲಾಗಿದೆ ಎಂದು ಹೇಳಿದರು.

ಲಿಂಗಾಯತರಲ್ಲೂ ಹಲವು ಒಳಪಂಗಡಗಳಿವೆ. ಪ್ರತಿಯೊಬ್ಬರೂ ಒಳಮೀಸಲಾತಿ ಕೇಳುತ್ತಿದ್ದಾರೆ.. ಜಾತಿ ವ್ಯವಸ್ಥೆಯಲ್ಲಿ ಇಂತಹ ಕೆಲವೊಂದು ಸಂಗತಿಗಳು ಸಹಜವಾಗಿ ನಡೆಯುತ್ತಿರುತ್ತವೆ. ನಿಮ್ಮ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.

ನಗರಸಭೆ ಸದಸ್ಯ ಎಲ್.ಡಿ.ಚಂದಾವರಿ ಅವರಿಗೆ ಸಂಘದಿಂದ 'ಭಾವೈಕ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಸಹನಾ ಪಿಂಜಾರ, ತಾಜುದ್ದೀನ್ ನದಾಫ್, ಸೂಫಿಯಾ ಡಿ.ನದಾಫ್ ಅವರನ್ನು ಸನ್ಮಾನಿಸಲಾಯಿತು. ಡಾ. ರಜಿಯಾ ಬೇಗಂ ಅವರ 'ಪಿಂಜಾರ ಮಹಿಳೆಯರ ಜನಪದ ಸಂಸ್ಕೃತಿ' ಪುಸ್ತಕವನ್ನು ಸಾಹಿತಿ, ಶಿವಮೊಗ್ಗದ ಶ್ರೀಮತಿ ಡಿ.ಬಿ. ರಜಿಯಾಬೇಗಂ ಅವರು ಲೋಕಾರ್ಪಣೆಗೊಳಿಸಿದರು.

ಮಾಜಿ ಸಚಿವ ಬಿ.ಆರ್.ಯಾವಗಲ್, ಮಾಜಿ ಶಾಸಕರಾದ ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘದ ರಾಜ್ಯ ಉಪಾಧ್ಯಕ್ಷರಾದ ಎಂ.ಎಚ್. ಬೆಂಡಿಗೇರಿ, ಜಿ.ಡಿ. ನದಾಫ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘದ ಗದಗ ಜಿಲ್ಲಾಧ್ಯಕ್ಷ ಕೆ.ಎಫ್. ಹಳ್ಯಾಳ, ದಾವಣಗೆರೆ ಮಹಾನಗರ ಪಾಲಿಕೆ ಮೇಯರ್ ಚಮನಸಾಬ ಕೆ., ಗದಗ–ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಮಾಜಿ ಶಾಸಕರಾದ ರಾಮಣ್ಣ ಲಮಾಣಿ, ಜಿ.ಎಸ್. ಗಡ್ಡದ್ದೇವರಮಠ, ಮುಖಂಡರಾದ ಕಲ್ಮುದ್ದೀನಶಾ ಮಕಾನದಾರ, ಜಿಲ್ಲಾ ವಕ್ಫ್ ಬೋರ್ಡ್ ಚೇರಮನ್ ಜಿ.ಎಂ. ದಂಡಿನ, ಮಾಜಿ ಅಧ್ಯಕ್ಷ ಎಂ.ಆರ್. ಅಣ್ಣಿಗೇರಿ, ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ರಿಯಾಜ್ ಸಲೀಂ ನಾಗ್ತೆ, ಖಜಾಂಚಿ ಶಾಬುದ್ದೀನ ನೂರಭಾಷಾ, ಸಂಘಟನಾ ಕಾರ್ಯದರ್ಶಿಗಳಾದ ಎಂ.ಎಂ. ಗಾಡಗೋಳಿ, ಎಸ್.ಎಚ್. ಮುದಕವಿ, ಗದಗ ವಿಭಾಗೀಯ ಉಪಾಧ್ಯಕ್ಷ ಪಿ. ಇಮಾಮಸಾಬ, ವಿಭಾಗೀಯ ಕಾರ್ಯದರ್ಶಿ ಎಚ್.ಆರ್. ನದಾಫ, ಮಹಿಳಾ ಘಟಕದ ಗದಗ ಜಿಲ್ಲಾಧ್ಯಕ್ಷೆ ತಾಜಬೀ ನದಾಫ, ಜಿಲ್ಲಾ ಕಾರ್ಯದರ್ಶಿ ಎಂ.ಬಿ. ನದಾಫ ವಕೀಲರು, ಜಿಲ್ಲಾ ಖಜಾಂಚಿ ಎಸ್.ಎಂ. ಅಣ್ಣಿಗೇರಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಐ.ಎನ್. ಹುಬ್ಬಳ್ಳಿ, 32ನೇ ಸಂಸ್ಥಾಪನಾ ದಿನಾಚರಣೆ ಸಮಿತಿ ಅಧ್ಯಕ್ಷ ಕೆ.ಎಫ್. ಹುಲಕೋಟಿ (ರಬ್ಬಾನಿ), ರಾಜೇಸಾಬ ಅಣ್ಣಿಗೇರಿ, ಅಬ್ದುಲಶರೀಫ ನೂರಭಾಷಾ, ರಾಜೆಸಾಬ ಶಿಶುವಿನಹಳ್ಳಿ, ಆರ್.ವಾಯ್ ನದಾಫ್, ಎ.ಹೆಚ್ ಹೊಸಳ್ಳಿ, ಮಹಮ್ಮದರಫಿ ಅಣ್ಣಿಗೇರಿ, ಮೈನುದ್ದಿನ್ ನಲವಡಿ, ಜಾಕೀರ ಬಾಗಲಕೋಟ ಸೇರಿ ಹಲವರು ಉಪಸ್ಥಿತರಿದ್ದರು.

ಡಾ.ವೈ.ಆರ್. ಬೇಲೇರಿ ಅವರು ಸ್ವಾಗತಿಸಿದರು. ಆರ್‌ಜೆ ರಷೀದ ಕಾರ್ಯಕ್ರಮ ನಿರೂಪಿಸಿದರು.

ಗದಗ ಜಿಲ್ಲೆ ಸೇರಿ ರಾಜ್ಯದ ಹಲವು ಜಿಲ್ಲೆಗಳಿಂದ ಸುಮಾರು ಐದು ಸಾವಿರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

## ಪಿಂಜಾರ ಭವನಕ್ಕೆ 1 ಕೋಟಿ ರೂ.

ಗದಗ: ಗದಗ ನಗರದಲ್ಲಿ ನದಾಫ್, ಪಿಂಜಾರ ಸಮಾಜಕ್ಕೆ ನೀಡಿರುವ ಜಾಗದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಪ್ರಸಕ್ತ ಆರ್ಥಿಕ ವರ್ಷದಲ್ಲೇ ಸರ್ಕಾರದಿಂದ 1ಕೋಟಿ ರೂ. ದೊರಕಿಸಿಕೊಡಲಾಗುವುದು. ಹೊಸಪೇಟೆಯಲ್ಲಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆ ಹಿಂಪಡೆದಿರುವ 75 ಲಕ್ಷ ರೂ. ಹಣವನ್ನು ಡಿಸೆಂಬರ್ ಒಳಗೆ ದೊರಕಿಸಿಕೊಡಲಾಗುವುದು ಎಂದು ರಾಜ್ಯದ ಕಾನೂನು, ಸಂಸದೀಯ ವ್ಯಹರಾಗಳ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರೂ ಆಗಿರುವ ಎಚ್.ಕೆ. ಪಾಟೀಲ ಅವರು ಭರವಸೆ ನೀಡಿದರು.

# ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಮಿಶ್ರ ತಳಿ ಕರುಗಳ ಪ್ರದರ್ಶನ



ಕುಷ್ಟಗಿ :–ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಯಿಂದ ತಾಲ್ಲೂಕಿನ ಕಬ್ಬರಗಿ ವ್ಯಾಪ್ತಿಯ ಬೀಳಗಿ ಗ್ರಾಮದಲ್ಲಿ ಇಂದು ಮಿಶ್ರ ತಳಿ ಕರುಗಳ ಪ್ರದರ್ಶನ ಹಮ್ಮಿಕೊಳ್ಳಲಾಯಿತು ಎಂದು ಹಿರಿಯ ಪಶುವೈ ದ್ಯಾಧಿಕಾರಿ ಡಾ.ಸಿದ್ಧಲಿಂಗಯ್ಯ ಶಂಕೀನ್ ತಿಳಿಸಿದರುಹಿರಿಯ ಪಶುವೈ ದ್ಯಾಧಿಕಾರಿ ಡಾ.ಸಿದ್ಧಲಿಂ ಗಯ್ಯ ಶಂಕೀನ್ ಮಾತನಾಡಿ ಉತ್ತಮ ತಳಿಗಳ ಸಾಕುವ ವಿಧಾನ ವನ್ನು ತಿಳಿದು ಕೊಂಡು ಹೈನುಗಾರಿಕೆ ಲಾಭದಾಯಕ ವನ್ನಗಿಸಿಕೊಳ್ಳಬೇಕು,ನಿರುದ್ಯೋಗ ಯುವಕ, ಯುವತಿ ಯರಿಗೆ ಹೈನುಗಾರಿಕೆ ಉದ್ಯೋಗ ಲಾಭದಾಯಕವಾಗಿದೆ, ಇಂದಿನ ಪ್ರಸ್ತುತ ಅಗತ್ಯ ಸನ್ನಿವೇಶ ದಲ್ಲಿ ರೈತರು ಅಧುನಿಕ ಪಶುಪಾಲನಾ ಚಟುವಟಿಕೆಗಳನ್ನು ಉಳಿಸಿಕೊಂಡಾಗ ಮಾತ್ರ ಅಭಿವೃದ್ಧಿ ಸಾಧ್ಯ, ನಾವು ಕರುಗಳಿಗೆ ಮತ್ತು ಗರ್ಭ ಧರಿಸಿದ ಆಕಳ ಗಳಿಗೆ ಅಗತ್ಯ ತಕ್ಕಂತೆ ಪೋಷಕಾಂಶ ಆಹಾರ ನೀಡಬೇಕು, ಎಂದು ತಿಳಿಸುತ್ತಾ ಹೈನುಗಾರಿಕೆ ನಿರ್ವಹಣೆ ಬಗ್ಗೆ ತಿಳಿಸಿದರು.ತಾಲೂಕು ಮುಖ್ಯ ಪಶುವೈದ್ಯಾಧಿಕಾರಿ ಡಾ. ಆನಂದ್ ರವರು ಕರುಗಳ ನಿರ್ವಹಣೆ ಮತ್ತು ಜಂತು ನಿವಾರಕ ಔಷಧ ಬಗ್ಗೆ ರೈತರಿಗೆ ಮಾಹಿತಿ ನೀಡಿದರು.ಗ್ರಾಮ ಪಂಚಾಯಿತಿ ಅಧ್ಯಕ್ಷರು, ಬಸಮ್ಮಹಿರೇಗೌಡ್ರು, ಪಶುಪಾಲನಾ ಇಲಾಖೆಯ ಪಶು ವೈದ್ಯಾಧಿಕಾರಿ ಡಾ. ಸಂತೋಷ್, ಸಿಬ್ಬಂದಿ ಅಮರಪ್ಪ, ದಂಡೆಪ್ಪ್, ಸಿದ್ಧಲಿಂಗಪ್ಪ, ರಿಯಾಜ್, ಶರಣು, ಪಶು ಸಖಿ, ಗ್ರಾಮಸ್ಥರು ಹಾಜರಿದ್ದರು. ಪಶುಪಾಲನಾ ಇಲಾಖೆಯಿಂದ ಉತ್ತಮ ಕರುಗಳ ನಿರ್ವಹಣೆ ಮಾಡಿದವರಿಗೆ ಬಹುಮಾನಗಳನ್ನು ವಿತರಸಲಾಯಿತು ಮತ್ತು ಹಾಜರಿದ್ದ ಎಲ್ಲಾ ಕರುಗಳಿಗೆ ಜಂತು ನಿವಾರಕ ಔಷಧ ಮತ್ತು ಲಿವರ್ ಟಾನಿಕ್ ವಿತರಿಸಲಾಯಿತು.

# ಉಷಾತಾಯಿ ಗೊಗಟೆ ಬಾಲಕಿಯರ ವಿದ್ಯಾಲಯದಲ್ಲಿ ವಾರ್ಷಿಕ ಬಹುಮಾನ ವಿತರಣಾ ಸಮಾರಂಭ



ಬೆಳಗಾವಿ : ಎಜುಕೇಶನ್ ಸೊಸೈಟಿಯ ಶ್ರೀಮತಿ ಉಷಾತಾಯಿ ಗೊಗಟೆ ಬಾಲಕಿಯರ ವಿದ್ಯಾಲಯುದಲ್ಲಿ ವಾರ್ಷಿಕ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಉದ್ಯಮಿಗಳಾದ ಬೆಳಗಾವಿಯ ರತ್ನಾಕರ ದೊಡ್ಡಣ್ಣನವರ್ ಮತ್ತು ನಂದಾ ದೊಡ್ಡಣ್ಣನವರ್ ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಿದರು.

ಸಂಸ್ಥೆಯ ಅಧ್ಯಕ್ಷ ಅವಿನಾಶ ಪೋತದಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. 2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಯರನ್ನು ಸನ್ಮಾನಸಲಾಯಿತು.

ಸುಧಾಕರ ಶಾನಭಾಗ, ವಾಮನ್ ಹುಯಿಲಗೋಳ, ಸುಧಾ ಮೂರ್ತಿ (ಬೆಂಗಳೂರು), ಸತೀಶ ದೇಶಪಾಂಡೆ, ವಿ.ಆರ್.ಗುಡಿ, ಎಲ್.ಡಿ.ಮದಿಹಳ್ಳಿ ಮುಂತಾದ ಅನೇಕ ಶಿಕ್ಷಣ ಪ್ರೇಮಿಗಳು ನೀಡಿದ ಸಹಯ್ಯ ಅನುದಾನದಿಂದ ಬಹುಮಾನಗಳನ್ನು ನೀಡಲಾಯ್ತು . ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ಸಮಾಜ ವಿಜ್ಞಾನ ವಿಷಯದಲ್ಲಿ ಶೇ.100 ಫಲಿತಾಂಶ ನೀಡಿದ ವಿಷಯ ಶಿಕ್ಷಕಿ ವರ್ಷಾ ನೈಕ್ ಅವರನ್ನು ಅವಿನಾಶ ಪೋತದಾರ ಸನ್ಮಾನಿಸಿದರು.

ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಚಿಂತಾಮಣಿ ಗ್ರಾಮೋಪಾಧ್ಯೆ, ಸಂಸ್ಥೆಯ ಸದಸ್ಯ ವಿಜೇಂದ್ರ ಗುಡಿ, ನವೃತ್ತ ಶಿಕ್ಷಕ ಎ.ಎಸ್.ಬಾಗೇವಾಡಿ, ಸರಸ್ವತಿ ದೇಸಾಯಿ ಉಪಸ್ಥಿತರಿದ್ದು, ಪ್ರಾಚಾರ್ಯ ಎಂ ಕೆ ಮಾದಾರ್ ಪ್ರಾಸ್ತಾವಿಕ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಸುಲೋಚನಾ ಐವಾಳೆ ವಂದಿಸಿದರು, ಶ್ರೀದೇವಿ ಕುಲಕರ್ಣಿ ವರದಿ ಮಂಡಿಸಿದರು, ವಿದ್ಯಾರ್ಥಿನ ವೈಷ್ಣವಿ ಸೂಪೆ ನರೂಪಿಸಿದರು. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

# ಮತ್ತೊಮ್ಮೆ ಅಧಿಕಾರದ ಗದ್ದುಗೆ ಏರಿದ ಅವಿನಾಶ ಹೊಳೆಪ್ಪಗೋಳ ರಾಜ್ಯ ಸರ್ಕಾರಿ ನೌಕರರ ಸಂಘದ ಹುಕ್ಕೇರಿ ಶಾಖೆಯ ಅಧ್ಯಕ್ಷರಾಗಿ ಮರು ಆಯ್ಕೆ



ಹುಕ್ಕೇರಿ : ತೀವ್ರ ಕುತೂಹಲ ಮೂಡಿಸಿದ್ದ ರಾಜ್ಯ ಸರ್ಕಾರಿ ನೌಕರರ ಸಂಘದ ಹುಕ್ಕೇರಿ ತಾಲೂಕು ಘಟಕದ ಅಧ್ಯಕ್ಷರಾಗಿ ಅವಿನಾಶ ಹೊಳೆಪ್ಪಗೋಳ ಅವರು ಮರು ಆಯ್ಕೆಯಾಗಿದ್ದಾರೆ.

ತಾಲೂಕು ಪಂಚಾಯಿತಿ ಆವರಣದಲ್ಲಿ ಶನಿವಾರ 2024–29ನೇ ಅವಧಿಗೆ ನಡೆದ ಸಂಘದ ತಾಲೂಕು ಘಟಕದ ಅಧ್ಯಕ್ಷ ಹುದ್ದೆಯ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಅವಿನಾಶ ಹೊಳೆಪ್ಪಗೋಳ ಜಯ ಗಳಿಸಿದ್ದಾರೆ ಎಂದು ಸಹಾಯಕ ಕೃಷಿ ನಿರ್ದೇಶಕರೂ ಆದ ಚುನಾವಣಾಧಿಕಾರಿ ಆರ್.ಬಿ.ನಾಯ್ಕರ ಘೋಷಿಸಿದರು.

ಈ ಅಧ್ಯಕ್ಷ ಹುದ್ದೆಗೆ ಆಯ್ಕೆ ಬಯಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅವಿನಾಶ ಹೊಳೆಪ್ಪಗೋಳ ಮತ್ತು ಶಿಕ್ಷಣ ಇಲಾಖೆಯ ಎಂ.ಬಿ.ನಾಯಿಕ ನಡುವೆ ಸ್ಪರ್ಧೆ ಏರ್ಪಟ್ಟು ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿತ್ತು. ನೇರಾನೇರ ಸ್ಪರ್ಧೆ ಕಂಡು ಬಂದಿತು. ಒಟ್ಟು ಚಲಾವಣೆಯಾದ 31 ಮತಗಳ ಪೈಕಿ ಅವಿನಾಶ ಹೊಳೆಪ್ಪಗೋಳ 16 ಮತಗಳನ್ನು ಪಡೆಯುವ ಮೂಲಕ ಸಂಘದ ಅಧ್ಯಕ್ಷರಾಗಿ ಮತ್ತೊಮ್ಮೆ ಗೆಲುವಿನ ನಗೆ ಬೀರಿದ್ದಾರೆ. ಇನ್ನು ಪ್ರತಿಸ್ಪರ್ಧಿ ಎಂ.ಬಿ.ನಾಯಿಕ 15 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.

ಇನ್ನು ರಾಜ್ಯ ಪರಿಷತ್ ಸ್ಥಾನಕ್ಕೆ ಖಜಾನೆ ಇಲಾಖೆಯ ಸುಭಾಷ ಝುಂಡೆನ್ನವರ 24 ಮತಗಳನ್ನು ಪಡೆದು ಜಯಗಳಿಸಿದರೆ, ಪ್ರತಿಸ್ಪರ್ಧಿ ಆರೋಗ್ಯ ಇಲಾಖೆಯ ನವೀನಕುಮಾರ ಬಾಯಿನಾಯಕ ಕೇವಲ 7 ಮತಗಳನ್ನು ಪಡೆದು ಹೀನಾಯ ಸೋಲುಂಡರು. ತಾಲೂಕು ಘಟಕದ ಖಜಾಂಚಿ ಸ್ಥಾನಕ್ಕೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಸಿ.ಎ.ಪಾಟೀಲ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಆಯ್ಕೆಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಮಾಜಿ ಸಂಸದ ರಮೇಶ ಕತ್ತಿ, ಶಾಸಕ ನಿಖಿಲ್ ಕತ್ತಿ, ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ, ಜಿಲ್ಲಾ ಅಧ್ಯಕ್ಷ ಬಸವರಾಜ ರಾಯವ್ವಗೋಳ ಮುಖಂಡರಾದ ಕಿರಣ ರಜಪೂತ, ಇಲಿಯಾಸ ಇನಾಮದಾರ ಹರ್ಷ ವ್ಯಕ್ತಪಡಿಸಿದ್ದಾರೆ. ತಾಪಂನ ಪ್ರಥಮ ದರ್ಜೆ ಲೆಕ್ಕ ಸಹಾಯಕ ಕಿರಣ ಅಂಬೇಕರ ಸಹಾಯಕ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ತಾಪಂ ಇಒ ಟಿ.ಆರ್.ಮಲ್ಲಾಡದ, ಶಿರಸ್ತೇದಾರ ಎನ್.ಆರ್.ಪಾಟೀಲ, ಕಂದಾಯ ನಿರೀಕ್ಷಕ ಮಲ್ಲಿಕಾರ್ಜುನ ಸಾರಾಪುರಿ, ವಿಶ್ವನಾಥ ಹಿರೇಮಠ, ಶಿವು ಢಂಗ, ಶಂಕರ ಕಾಂಬಳೆ, ಪ್ರದೀಪ ನೇರ್ಲಿಕರ, ಸಂತೋಷ ನಾಯಿಕ, ರವೀಂದ್ರ ಕಂಕಣವಾಡಿ, ನಾಗಲಿಂಗ ಮಾಳಗೆ, ನವೀನ ಗಂಗರೆಡ್ಡಿ, ಮಯೂರ ತಮ್ಮಣ್ಣವರ, ರಾಜು ಪಾಟೀಲ, ಶಶಿಧರ ಭೂಸಗೋಳ, ರಾಜು ಮಾಳಿ, ಗಿರೀಶ ವಾಲಿ, ಬಿ.ಕೆ.ಚೌಗಲಾ, ನಾಗಯ್ಯ ಹಿರೇಮಠ, ರಘು ಕಾಂಬಳೆ, ಸಂತೋಷ ಹೊಳೆಪ್ಪಗೋಳ, ಮುಖಂಡರಾದ ಬಸವೇಶ ಪಟ್ಟಣಶೆಟ್ಟಿ, ರವಿ ಕಾಂಬಳೆ, ಚೇತನ ಹೊಳೆಪ್ಪಗೋಳ, ಸುರೇಶ ಕಿಲ್ಲೇದಾರ, ಸಚಿನ್ ಖೋತ, ಶಿವು ಮಾಳಗೆ, ಕಿರಣ ಚಿಗರಿ ಮತ್ತಿತರರು ಉಪಸ್ಥಿತರಿದ್ದರು.

ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಗಳು ಜಯಗಳಿಸುತ್ತಿದ್ದಂತೆ ನೌಕರರು ಮತ್ತವರ ಬೆಂಬಲಿಗರು ತಾಪಂ ಆವರಣ ಮತ್ತು ಕೋರ್ಟ್ ಸರ್ಕಲ್ ಬಳಿ ಸಿಹಿ ಹಂಚಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಹುಕ್ಕೇರಿ ಶಾಖೆಯ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವುದು ಸಂತೋಷ ತಂದಿದೆ. ಇದರಿಂದ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದ್ದು ಅಧಿಕಾರವಧಿಯಲ್ಲಿ ನೌಕರರ ಏಳಿಗೆಗೆ ಶ್ರಮಿಸಲಾಗುವುದು.

# ಅಕಾಲಿಕ ಮಳೆಯಿಂದ ನಷ್ಟಕ್ಕೀಡಾದ ಬೆಳೆಗಳಿಗೆ ನಷ್ಟ ಪರಿಹಾರ ನೀಡಲು ಮನವಿ




ಬಳ್ಳಾರಿ–:ಇಂದು AIKKMS ರೈತ ಸಂಘಟನೆ ವತಿಯಿಂದ ಮಳೆಯಿಂದಾಗಿ ನಷ್ಟಕ್ಕೀಡಾದ ಭತ್ತಕ್ಕೆ ನಷ್ಟ ಪರಿಹಾರಕ್ಕಾಗಿ ಮಾನ್ಯ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ದೇಶಕ್ಕೆ ಅನ್ನ ನೀಡುವ ರೈತರ ಪರಿಸ್ಥಿತಿ ಇಂದು ಚಿಂತಾಜ ನಕವಾಗಿದೆ. ಸುಮಾರು ಮೂರು ನಾಲ್ಕು ವರ್ಷಗಳಿಂದ ರಾಜ್ಯದಲ್ಲಿನ ರೈತರು ನಿರಂತರವಾಗಿ ನಷ್ಟವನ್ನನು ಭವಿಸುತ್ತಿದ್ದಾರೆ.

ಒಂದು ಬಾರಿ ಮಳೆ ಇಲ್ಲದೆ ಉಂಟಾದ ನಷ್ಟ, ಇನ್ನೊಂದು ಬಾರಿ ಅತೀ ಹೆಚ್ಚಿಗೆ ಮಳೆ ಬಂದು ಅತೀವೃಷ್ಟಿಯಿಂದಾದ ನಷ್ಟ ಈ ರೀತಿಯಾಗಿ ಪ್ರತಿವರ್ಷ ಒಂದಲ್ಲ ಒಂದು ರೀತಿಯಾಗಿ ನಷ್ಟವನ್ನು ರೈತ ಎದುರಿಸುತ್ತಿದ್ದಾನೆ.

ಈ ವರ್ಷ ಪ್ರಾರಂಬದಲ್ಲಿಯೇ ಮಳೆ ಸರಿಯಾದ ಪ್ರಮಾಣದಲ್ಲಿ ಬೇಕಾದಷ್ಟು ಆಗಿದ್ದು, ಅದು ರೈತರಲ್ಲಿ ಸ್ವಲ್ಪ ನಿಟ್ಟುಸಿರು ಬಿಡುವಂತೆ ಆಗಿತ್ತು.

ಆದರೆ ಸದ್ಯ ಈಗ ನಾಲ್ಕು, ಐದು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಈಗಾಗಲೇ ಭತ್ತದ ಬೆಲೆ ಸಂಪೂರ್ಣ ನೆಲಕ್ಕಚ್ಚಿದೆ. ಜೋಳ, ಮುಸಿಕಿನಜೋಳ, ಮೆಣಸಿನಕಾಯಿ ಸೇರಿದಂತೆ ಇತರ ಬೆಳೆಗಳೂ ಸಹ ಸಂಪೂರ್ಣವಾಗಿ ನಷ್ಟಕ್ಕೀಡಾಗುವ ಸಾಧ್ಯತೆ ಇದ್ದು, ಸರ್ಕಾರ ಈ ಪರಿಸ್ಥಿತಿಯಲ್ಲಿ ರೈತರಿಗೆ ಹೆಗಲು ನೀಡಿದ್ದಿದ್ದ ಸಂಧರ್ಭದಲ್ಲಿ ರಾಜ್ಯದಲ್ಲಿ ಭಾರೀ ಅನಾಹುತಗಳು, ರೈತರ ಆತ್ಮಹತ್ಯೆಗಳು ಸಂಭವಿಸುವ ಸಾಧ್ಯತೆ ಇದೆ. ಜೊತೆಗೆ ಹಿಂದಿನ ವರ್ಷ ಬೆಳೆಗಳಿಗಿದ್ದ ಬೆಲೆಯೂ ಸಹ ಈಗ ಇಲ್ಲದಾಗಿದೆ, ಅಷ್ಟೇ ಅಲ್ಲದೆ ಈ ಭಾರಿ ಇದುವರೆಗೂ ಸಹ ಖರೀದಿ ಕೇಂದ್ರ ತೆರೆಯದಿರುವುದು ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಹಾಗಾಗಿ ಸರ್ಕಾರ ಕೂಡಲೇ ರೈತರ ಉದ್ಧಾರಕ್ಕಾಗಿ ಈ ಕೆಳಗಿನ ಬೇಡಿಕೆಗಳನ್ನು ಹಿಡೇರಿಸಬೇಕು.

ಬೇಡಿಕೆಗಳು:ಕೂಡಲೇ ನಷ್ಟಕ್ಕೀಡಾದ ಜಿಲ್ಲೆಯ ರೈತರ ಭತ್ತದ ಬೆಳೆಗೆ ನಷ್ಟ ಪರಿಹಾರ ನೀಡಬೇಕು.

ಜಿಲ್ಲೆಯ ಎಲ್ಲಾ ತಾಲೂಕು ಮತ್ತು ಓಬಳಿ ಮಟ್ಟದಲ್ಲಿ ಬತ್ತ, ಜೋಳ ಸೇರಿದಂತೆ ಇತರ ಬೆಳೆಗಳ ಖರೀದಿ ಕೇಂದ್ರ ತೆರೆಯಬೇಕು.ಬೆಳೆ ಖರಿಧಿಸಲು ಇರುವ ಮಿತಿಯನ್ನು ತೆಗೆಯಬೇಕು ಮತ್ತು ವಿಳಂಬ ಮಾಡದೆ ಖರೀದಿ ಹಣವನ್ನು ರೈತರಿಗೆ ಸಂದಾಯ ಮಾಡಬೇಕು.

ಬತ್ತಕ್ಕೆ 3,500 ಜೋಳಕ್ಕೆ ಮತ್ತು ಮುಸಿಕಿನ ಜೋಳಕ್ಕೆ 3,000 ರೂ. ಬೆಂಬಲ ಬೆಲೆ ನೀಡಬೇಕು ಮತ್ತು ಸರ್ಕಾರವೇ ರೈತರ ಎಲ್ಲಾ ಬೆಳೆಗಳನ್ನು ಖರಿಧಿಸಬೇಕು ಎಂದು ಆಗ್ರಹಿಸಿದರು

ಜೋತೆಗೆ ಇದೇ ತಿಂಗಳ 19 ರಂದು ಈ ಮೇಲಿನ ಸಮಸ್ಯೆಗಳ ಹಿಡೇರಿಕೆಗಾಗಿ ದೇಶವ್ಯಾಪಿ ಹೋರಾಟ ನಡೆಯುತ್ತಿದೆ ಜಿಲ್ಲೆಯ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರು ಗೋವಿಂದ್, ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ, ಜಿಲ್ಲಾ ಸಮಿತಿ ಸದಸ್ಯ ಧನರಾಜ್ ಇದ್ದರು.

GADI KANNADIGA,kannada daily, printed, published , edited, & woned by murugesh b.shivapuji ,printed ,plot no:12,sy no:174/3b,press colony,kuvempu nagar, post:hindalaga-591108,Tq & Dt:belgaum, And published at plot no:12,sy no:174/3b,press colony,kuvempu nagar,post:hindalaga-591108,Tq & Dt:belgaum, karnataka, RNI NO:KAR KAN/2003/10452. Permission to post at Belagavi, Kacheri post office Belagavi. No:PMG/KA/NK/BM/743/24-26